**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂ:31/2019 ಪಿ.ಡಬ್ಲೂ: 01**

ಸಾಕ್ಷಿಯನ್ನು ಇಂದು ದಿನಾಂಕ: **08.09.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲು:** ಪ್ರತಿವಾದಿ ಪರ ಶ್ರೀ **ಎಂ.ಡಿ** ವಕೀಲರಿಂದ:

ನನ್ನ ತಂದೆ ಮಹದೇವಪ್ಪರವರಿಗೆ ಒಡಹುಟ್ಟಿದ ತಮ್ಮ ಹಾಗೂ ಮೂರು ಜನ ಸಹೋದರಿಯರು ಇರುತ್ತಾರೆ. ಸದರಿಯವರ ಹೆಸರು ರುದ್ರಮೂರ್ತಿ, ಭಾಗ್ಯಮ್ಮ, ಶಿವಮ್ಮ ಮತ್ತು ಸರೋಜಮ್ಮ ಎಂದು ಇರುತ್ತದೆ. ಈ ಹಿಂದೆ ನನ್ನ ತಂದೆ ಮಹದೇವಪ್ಪ ಮತ್ತು ರುದ್ರಮೂರ್ತಿರವರ ನಡುವೆ ಆದ ವಿಭಾಗ ಪತ್ರ ಇರುತ್ತದೆ. ಸದರಿ ವಿಭಾಗ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ದಾವಾ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿ ಇರುವ ಬಾಬ್ತು ಖಾತೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿ ಇತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ 2009 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆಗೆ ಒಟ್ಟು 5 ಜನ ಮಕ್ಕಳು ಇರುತ್ತಾರೆ. ನಾನು ಮತ್ತು 4 ಜನ ಸಹೋದರಿಯರು ಇರುತ್ತೇವೆ. ನನ್ನ ಸಹೋದರಿಯರ ಹೆಸರುಗಳು ನಾಗರತ್ನ, ಸುನಂದಾ, ಉಮಾ ಮತ್ತು ಪಾರ್ವತಿ ಎಂದು ಇರುತ್ತದೆ. ದಾವಾ-ಎ ಆಸ್ತಿಯು ನನಗೆ, ನನ್ನ ತಾಯಿ ಹಾಗೂ ನನ್ನ ಸಹೋದರಿಯರಿಗೆ 1 ನೇ ವರ್ಗದ ವಾರಸುದಾರರಾಗಿ ಬಂದಿರುತ್ತದೆ ಎಂದರೆ ಸರಿ. ಆದಕಾರಣ ಸದರಿಯವರೆಲ್ಲರೂ ಈ ದಾವೆಯಲ್ಲಿ ಪಕ್ಷಗಾರರಬೇಕಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಮನೆಯ ವ್ಯವಹಾರಗಳನ್ನು ನನ್ನ ತಾಯಿ ನೋಡಿಕೊಳ್ಳುತ್ತಾರೆ. ನನ್ನ ತಾಯಿಗೆ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷಿ ನುಡಿಯಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿ ಸದರಿಯವರಿಗೆ ಮದುಮೇಹ ಹಾಗೂ ಬಿಪಿ ಇರುತ್ತದೆ ಮತ್ತು

ಸದರಿಯವರಿಗೆ ವಯಸ್ಸು ಆಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಾಯಿಗೆ ವಯಸ್ಸಾದ ಕಾರಣ ಕುಟುಂಬದ ಹಾಗೂ ಆಸ್ತಿಗಳ ನಿರ್ವಹಣೆಯನ್ನು ನಾನು ಮಾಡುತ್ತಿದ್ದೇನೆ.

ದಾವಾ-ಬಿ ಷೆಡ್ಯೂಲ್ ಆಸ್ತಿಯಲ್ಲಿ ಪ್ರತಿವಾದಿ ಹಾಕಿರುವ ಮನೆ ತಳಪಾಯ ಇರುತ್ತದೆ ಎಂದರೆ ಸರಿ. ಸದರಿಯವರು ಪೂರ್ವ -ಪಶ್ಚಿಮ 50 ಅಡಿ ಹಾಗೂ ಉತ್ತರ-ದಕ್ಷಿಣ 60 ಅಡಿ ವಿಸ್ತೀರ್ಣದಲ್ಲಿ ತಳಪಾಯ ಹಾಕಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವಿಸ್ತೀರ್ಣದ ಆಸ್ತಿ ಗ್ರಾಮ ಠಾಣಾ ಪ್ರದೇಶದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಖಾತೆಯು ಜಂಜರ್ ನಂ.145, ಆಸ್ತಿ ಸಂ.115 ರಂತೆ ಪ್ರತಿವಾದಿ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ-ಬಿ ಆಸ್ತಿಯು ಪ್ರತಿವಾದಿಗೆ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ-ಬಿ ಆಸ್ತಿಗೂ ಹಾಗೂ ದಾವಾ-ಎ ಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿಯು 2 ಆಸ್ತಿಗಳು ಒಂದೇ ಸರ್ವೇ ನಂಬರನಲ್ಲಿ ಇರುತ್ತವೆ ಎಂದು ನುಡಿಯುತ್ತಾರೆ. ದಾವೆ ಹಾಕುವ ಮುನ್ನ ದಾವಾ-ಬಿ ಷೆಡ್ಯೂಲ್ ಆಸ್ತಿಯು ದಾವಾ-ಎ ಷೆಡ್ಯೂಲ್ ಆಸ್ತಿಯಲ್ಲಿ ಬರುತ್ತದೆ ಎಂದು ತೋರಿಸಲು ನನ್ನ ತಂದೆ ಜೀವಿತಾವಧಿಯಲ್ಲಿ ಅಳತೆ ಮಾಡಿಸಿರುತ್ತೇವೆ. ಸದರಿ ಅಳತೆ ಕಾರ್ಯ ಮಾಡಿಸಿದ ಬಾಬ್ತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ITI ವಿಧ್ಯಾಭ್ಯಾಸ ಮಾಡಿರುತ್ತೇನೆ. ಸದರಿ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಹಾಜರುಪಡಿಸಿರುವ ದಾವಾ-ಬಿ ಆಸ್ತಿಯು ದಾವಾ-ಎ ಆಸ್ತಿಯ ಭಾಗವಾಗಿರುತ್ತದೆ ಎಂದು ಇರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-5 ದಾಖಲೆಯನ್ನು ನಾನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯನ್ನು ಯಾವಾಗ ತಯಾರಿಸಲಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ದಾಖಲೆಯು ಸರ್ವೇ ನಂ.95 ಆಸ್ತಿಯು 4 ವಿಭಜನೆಯಾದ ಬಾಬ್ತು ಇರುತ್ತದೆ ಎಂದರೆ ಸರಿ. ಸರ್ವೇ ನಂ.95/3 ಮತ್ತು 95/4 ಆಸ್ತಿಗಳು ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಇರುತ್ತವೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳನ್ನು ನಾನು

ಓದಿ ಪರಿಶೀಲಿಸಿರುತ್ತೇನೆ. ಸರ್ವೇ ನಂ.95/3 ಮತ್ತು 95/4 ಆಸ್ತಿಗಳು ನಿಪಿ-16 ಮತ್ತು ನಿಪಿ-16 ರಂತೆ ಗ್ರಾಮ ಠಾಣಾ ಪ್ರದೇಶಗಳಾಗಿರುತ್ತವೆ ಎಂದರೆ ಸರಿ. ನಿಪಿ-5 ರ ಪ್ರಕಾರ ಸರ್ವೇ ನಂ.95/2 ರಲ್ಲಿ 1 ಗುಂಟೆ ಪ್ರದೇಶವನ್ನು ಸರ್ಕಾರಿ ಗರಿಬಿ ಹಟಾವೋ ರವರಿಗೆ ವಿಲೇವಾರಿ ಆಗಿರುವವರು ತಿಪ್ಪೆ ಹಾಕಿಕೊಂಡು ಒತ್ತುವರಿ ಮಾಡಿಕೊಂಡಿರುತ್ತಾರೆ ಎಂದು ನಮೂದು ಇರುತ್ತದೆ ಎಂದರೆ ಸರಿ. ಸರ್ವೇ ನಂ.95/3 ಮತ್ತು 95/4 ಆಸ್ತಿಗಳು ಸರ್ವೇ ನಂ.95/1 ಮತ್ತು 95/2 ರ ದಕ್ಷಿಣ ದಿಕ್ಕಿನಲ್ಲಿ ಇರುತ್ತವೆ ಎಂದರೆ ಸರಿ. ಸದರಿ ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಬರುವ 1 ಗುಂಟೆ ಆಸ್ತಿಯನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ ಎಂದು 1987 ರಲ್ಲಿಯೇ ನಿಪಿ-5 ರಲ್ಲಿ ನಮೂದು ಮಾಡಲಾಗಿದೆ ಎಂದರೆ ಸರಿ. ಸದರಿಯವರ ವಿರುದ್ಧ ನಾವು ಯಾವುದೇ ದಾವೆಯನ್ನು ಹಾಕಿರುವುದಿಲ್ಲ. ಸರ್ವೇ ನಂ.95/1 ಮತ್ತು 95/2 ನನ್ನ ತಾತ ಶಿವಾರ್ಚಕ ಲಿಂಗಪ್ಪ ರವರ ಹೆಸರಿನಲ್ಲಿ ನಿಪಿ-3 ರಂತೆ ಖಾತೆ ಆಗಿರುತ್ತದೆ ಎಂದರೆ ಸರಿ.

ಸರ್ವೇ ನಂ.95/1 ಮತ್ತು 95/2 ಆಸ್ತಿಗಳನ್ನು ಒಟ್ಟಾಗಿ ಸರ್ವೇ ಮಾಡಿಸಿರುತ್ತೇವೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸರ್ವೇ ನಂ.95/2 ರಲ್ಲಿ ಒತ್ತುವರಿಯಾಗಿರುವ ಆಸ್ತಿಗಳನ್ನು ಸರಿಪಡಿಸಿಕೊಳ್ಳುವ ಸಲುವಾಗಿ ಪ್ರತಿವಾದಿಗೆ ಸೇರಿದ ಬಿ ಷೆಡ್ಯೂಲ್ ಆಸ್ತಿಯನ್ನು ದಾವಾ-ಎ ಷೆಡ್ಯೂಲ್ ಆಸ್ತಿಯ ಭಾಗ ಎಂದು ಈ ದಾವೆಯನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ.

ನಿಪಿ-9 ಮತ್ತು 10 ಫೋಟೋಗಳಲ್ಲಿ ಇರುವ ವಾಹನಗಳು ಪ್ರತಿವಾದಿಗೆ ಸೇರಿರುತ್ತವೆ ಎಂದರೆ ಸರಿ. ಸದರಿ ವಾಹನಗಳನ್ನು ನಿಲ್ಲಿಸಿರುವ ಜಾಗವನ್ನು ಪ್ರತಿವಾದಿಯು ಪಿತ್ರಾರ್ಜಿತವಾಗಿ ತಮ್ಮ ತಂದೆಯ ಕಾಲದಿಂದಲೂ ಅನುಭವಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಾಹನಗಳು ನಿಲ್ಲಿಸಿರುವ ಜಾಗವು ದಾವಾ-ಬಿ ಷೆಡ್ಯೂಲ್ ಆಸ್ತಿ ಆಗಿರುತ್ತದೆ ಎಂದರೆ ಸರಿ. ದಾವಾ-ಬಿ ಆಸ್ತಿಯು ದಾವಾ-ಎ ಆಸ್ತಿಯ ಭಾಗ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸದ ಕಾರಣ ಈ ದಾವೆಯು ಅನುರ್ಜಿತವಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ-ಬಿ ಆಸ್ತಿಯನ್ನು ಪ್ರತಿವಾದಿಯು

ಒತ್ತುವರಿ ಮಾಡಿರುತ್ತಾರೆ ಎಂದು ತೋರಿಸಲು ನ್ಯಾಯಾಲಯದ ಕೋರ್ಟು ಕಮಿಷನರ ರವರು ಅಳತೆ ಕಾರ್ಯ ಮಾಡಿರುತ್ತಾರೆ. ಪ್ರತಿವಾದಿಯು ಯಾವುದೇ ಜಾಗವನ್ನು ಒತ್ತುವರಿ ಮಾಡದಿದ್ದರೂ ಸಹ ಪ್ರತಿವಾದಿಗೆ ಸೇರಿದ ಬಿ ಷೆಡ್ಯೂಲ್ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲಃ</u>

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**